**Crl. Misc. No.157/2018** **RW - 1**

ದಿನಾಂಕಃ **09.10.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರಿದ ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ಎಸ್. ವಿ. ಎಸ್ ವಕೀಲರಿಂದಃ

ಕುಟುಂಬದ ಆದಾಯ ಇದ್ದ ದಾಖಲೆ ಕೊಟ್ಟಿಲ್ಲ. Assets and liabilities ಅನ್ನು ನಾನು ಹಾಜರುಪಡಿಸಿಲ್ಲ. ಮತ್ತೂರಿನಲ್ಲಿ ಸರ್ವೆ ನಂ 39/6 ರಲ್ಲಿ 3 ಎಕರೆ ನನ್ನ ಹೆಸರಿನಲ್ಲಿದೆ ಎಂದರೆ ಸರಿ. ಸರ್ವೆ ನಂ 38/2 ರಲ್ಲಿ 1 ಎಕರೆ ಇದೆ. ಸರ್ವೆ ನಂ 39/5 ರಲ್ಲಿ 5 ಎಕರೆ ನನ್ನ ಸ್ವಂತದ್ದು ಅದನ್ನು ನನ್ನ ಮಗಳ ಹೆಸರಿನಲ್ಲಿ ಮಾಡಿರುತ್ತೇನೆ. ಸರ್ವೆ ನಂ 38 ರಲ್ಲಿ 1 ಎಕರೆ 58 ಸೆಂಟ್ ದಾರಿ ವಿಚಾರಕ್ಕೆ ವ್ಯಾಜ್ಯ ನಡೆಯುತ್ತಿದೆ. ಸರ್ವೆ ನಂ 39/2 ರಲ್ಲಿ 1 ಎಕರೆ ಇದೆ.

ಬಿ ಶೆಟ್ಟಿಗೇರಿ ಗ್ರಾಮದಲ್ಲಿ ಸರ್ವೆ ನಂ 37/22 ರಲ್ಲಿ 3 ಎಕರೆ 31 ಸೆಂಟ್ ಇದೆ. ಸರ್ವೆ ನಂ 37/2 ರಲ್ಲಿ 3 ಎಕರೆ 4 ಸೆಂಟ್ ತರಿಭೂಮಿ ಇದೆ, ಸರ್ವೆ ನಂ 37/30 ರಲ್ಲಿ 50 ಸೆಂಟ್ ಗದ್ದೆ ಇದೆ, ಸರ್ವೆ ನಂ 46/19 ರಲ್ಲಿ 4 ಎಕರೆ ಇದೆ, ಸರ್ವೆ ನಂ 37/29 ರಲ್ಲಿ 30 ಸೆಂಟ್ ಇದೆ ಎಂದರೆ ಸರಿಯಲ್ಲ ಒಟ್ಟು 3 ಎಕರೆ 30 ಸೆಂಟ್ ನಷ್ಟು ಇದೆ.

ಕೋತೂರಿನಲ್ಲಿ ಒಟ್ಟು 15 ಎಕರೆ ಜಮೀನು ಇದೆ. ಇದಲ್ಲದೆ ಹಳ್ಳಿಗಟ್ಟು ಗ್ರಾಮದಲ್ಲಿ ಜಂಟಿಯಾಗಿ 2005 ರಲ್ಲಿ 10 ಎಕರೆ ಖರೀದಿಸಿರುತ್ತೇವೆ ಎಂದರೆ ಸರಿ, ಆದರೆ ಕಂದಾಯ ದಾಖಲೆಗಳು ಇಲ್ಲ ಮತ್ತು ನನ್ನ ಗಂಡ ಬದುಕಿದ್ದಾಗ ಏನು ವ್ಯವಹಾರ ಮಾಡಿರುತ್ತಾರೊ ಗೊತ್ತಿಲ್ಲ. ಹಳ್ಳಿಗಟ್ಟುವಿನಲ್ಲಿ ಒಂದು ನಿವೇಶನ ನನ್ನ ಗಂಡ ನನ್ನ ಹೆಸರಿಗೆ ಮಾಡಿರುತ್ತಾರೆ. ಅರ್ಜಿದಾರಳಿಗೆ ನಾನು ಅವಳ ಸ್ವಂತ ಖರ್ಚಿಗೆ ಬೇಕಾದಷ್ಟು ಹಣ ಕೊಡುತ್ತಿದ್ದೆ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**sd/-**
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ